**ದಿ:07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ **4** ರಿಂದ **7** ಪರ ಶ್ರೀ. **B.S.,**ವಕೀಲರಿಂದ:-

ನಾನು ಸಹಾಯಕ ನಿರ್ದೇಶಕ ಗ್ರಾಮೀಣ ಉದ್ಯೋಗ ಇಲಾಖೆಯಿಂದ ನಿವೃತ್ತಿ ಆಗಿರುತ್ತೇನೆ . ನಾನು ಸದರಿ ಉದ್ಯೋಗವನ್ನು ಸನ್ 1994 ರಲ್ಲಿ ಸೇರಿಕೊಂಡಿರುತ್ತೇನೆ . ನಾನು ಮೊದಲಿಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ನಂಧಿಪುರ ಗ್ರಾಮ ಪಂಚಾಯತಿಯಲ್ಲಿ ಸನ್ 1994 ರಿಂದ 1995 ರ ತನಕ ಕೆಲಸ ಮಾಡಿರುತ್ತೇನೆ . ನಂತರ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಚಿಕ್ಕಬ್ಯಾಳಿಕೆರೆ ಗ್ರಾಮ ಪಂಚಾಯತಿಗೆ ವರ್ಗಾವಣೆ ಗೊಂಡಿರುತ್ತೇನೆ . ಅಲ್ಲಿ 2 ವರ್ಷ ಕೆಲಸ ಮಾಡಿ ನಂತರ ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು ಚಿಕ್ಕಗೊಂಡನಹಳ್ಳಿ ಗ್ರಾಮ ಪಂಚಾಯತಿಗೆ ವರ್ಗಾವಣೆ ಗೊಂಡು ಅಲ್ಲಿ 2 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ . ನಂತರ ದಾವಣಗೆರೆ ಜಿಲ್ಲೆಯ ಬಾಡಾ ಗ್ರಾಮ ಪಂಚಾಯತಿಯಗೆ ವರ್ಗಾವಣೆಗೊಂಡು ಅಲ್ಲಿ 2 ವರ್ಷ ಕೆಲಸ ಮಾಡಿರುತ್ತೇನೆ . ನಂತರ ನಾನು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ವಿವಿದ ಗ್ರಾಮ ಪಂಚಾಯತಿಯಗಳಲ್ಲಿ 17-18 ವರ್ಷ ಕೆಲಸ ಮಾಡಿರುತ್ತೇನೆ . ನಾನು ಕೊನೆಯದಾಗಿ ಸನ್ 2017 ರಲ್ಲಿ ಚನ್ನಗಿರಿ ತಾಲ್ಲೂಕು ಪಂಚಾಯತಿಯಲ್ಲಿ ಸಹಾಯಕ ನಿರ್ದೇಶಕನಾಗಿ ನಿವೃತ್ತಿ ಆಗಿರುತ್ತೇನೆ . ನಾನು ಹರಿಹರ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಮನೆ ಮಾಡಿ ನಮ್ಮ ಕುಟುಂಬದವರೊಂದಿಗೆ ದಾವಣೆಗೆರಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನನಗೆ ವಾದಿ ಮತ್ತು ಪ್ರತಿವಾದಿಗಳು ನನ್ನ ಚಿಕ್ಕವಯಸ್ಸಿನಿಂದ ನನಗೆ ಪರಿಚಯ ಇರುತ್ತಾರೆ . ನನಗೆ ವಾದಿ ಮತ್ತು ಪ್ರತಿವಾದಿಗಳ ಅವರ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ವಾದಿಯ ತಂದೆ ಬಸಪ್ಪ ರವರ ಅಣ್ಣ ತಮ್ಮಂದಿರು ಒಟ್ಟು 4 ಜನ ಇರುತ್ತಾರೆ . ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಆಸ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ . ವಾದಿ ಮತ್ತು ಪ್ರತಿವಾದಿಗಳ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂಬರ್ 1/6 ಇರುತ್ತದೆ . ದಾವಾ ಆಸ್ತಿ ಸರ್ವೆ ನಂಬರ್ 1/6 ಪೋಡು ಆಗುವ ಪೂರ್ವದಲ್ಲಿ ಒಟ್ಟು ವಿಸ್ತೀರ್ಣದ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನನ್ನ

ಮುಖ್ಯವಿಚಾರಣೆಯಲ್ಲಿ ವಾದಿ ಮತತ ಪ್ರತಿವಾದಿಗಳ ನಡುವೆ ಜುಬಾನಿ ಪಾರಿಕತ್ ಆದ ವಿಚಾರವಾಗಿ ಯಾರಿಗೆ ಎಷ್ಟು ಎಷ್ಟು ಪಾಲು ವಿಂಗಡಣೆ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿ ಸಂಬಂದ ವಾದಿಯವರಿಗೆ 7 ½ ಗುಂಟೆ ಕಣ ಇರುವ ಬಗ್ಗೆ ವಿಚಾರವನ್ನು ನಾನು ದಾಖಲೆಗಳನ್ನು ನೋಡಿರುವುದಿಲ್ಲ , ಸಾಕ್ಷಿ ಮುಂದುವರೆಸಿ ನನ್ನ ಅನುಭವದ ಮೇಲೆ ತಿಳಿಸಿರುತ್ತೇನೆ . ದಾವಾ ಆಸ್ತಿ ಪ್ರತಿವಾದಿ ತಂದೆ ನಾಗಲಿಂಗಪ್ಪರವರಿಗೆ ಪಾಲು ಬಂದ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಹಿಂದೆ ಒಟ್ಟು ವಿಸ್ತೀರ್ಣ 4 ಎಕರೆ 4 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ 4 ಎಕರೆ 4 ಗುಂಟೆ ಜಮೀನಿನಲ್ಲಿ ಎಂ ಸಿ ಬಸವರಾಜಪ್ಪ ಎಂಬುವವರಿಗೆ ಪ್ರತಿವಾದಿ 7 ರವರು 2 ಎಕರೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಉಳಿದ 1 ಎಕರೆ 14 ಗುಂಟೆ ಉತ್ತರ ಭಾಗದ ಜಮೀನು ಪ್ರತಿವಾದಿ 7 ರವರ ಹೆಸರಿಗೆ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ. ಉಳಿದ 30 ಗುಂಟೆ ಪ್ರತಿವಾದಿ 7 ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ವಿಭಾಗ ಆದ ನಂತರ ದಾವಾ ಆಸ್ತಿ ಅನುಭೋದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ವಾದಿಗಳ ತಂದೆ ಬಸಪ್ಪ , ಸಂಗಪ್ಪ , ಚನ್ನಬಸಪ್ಪ ಮತ್ತು ನಾಗಲಿಂಗಪ್ಪ ರವರು ತಲಾ 7 ½ ಗುಂಟೆ ಕಣ ಮಾಡಿಕೊಂಡು ಇರುತ್ತಾರೆ ಎಂದು ಹೇಳುತ್ತಾರೆ . ನಾನು ಈ ಬಗ್ಗೆ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಲಿಂಗಪ್ಪ ರವರು ಮರಣಾ ನಂತರ ಪ್ರತಿವಾದಿ 7 ರವರ ತಂದಗೆ ಬಂದ ದಾವಾ ಆಸ್ತಿ ಪಾಲಿನಲ್ಲಿ ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರವರು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಕಾಂಪೌಂಡ್ ಹಾಕಿ ತಿಪ್ಪೇ ಮತ್ತು ಇತರೆ ಸಾಮಾನುಗಳನ್ನು ಹಾಕಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿ ಅವರ ಪಾಲಿಗೆ ಬಂದ ಆಸ್ತಿಯಲ್ಲಿ ಮಾತ್ರ ಹಾಕಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ಪ್ರತಿವಾದಿ 7 ರವರ ಪಾಲಿಗೆ ಬಂದ ದಾಖಲೆಯನ್ನು ನಾನು ನೋಡಿರುವುದಿಲ್ಲ . ವಾದಿಗಳು ಈ ದಾವೆಯನ್ನು ಸನ್ 2013 ರಲ್ಲಿ ಸಲ್ಲಿಸಿರುತ್ತಾರೆ . ನಾನು ನೌಕರಿ ಮಾಡಿಕೊಂಡು ದಾವಣಗೆರೆ ಯಲ್ಲಿ ಇರುವ ಕಾರಣ ಕಟ್ಟಿಗೆಹಳ್ಳಿಯಲ್ಲಿ ವಾಸವಿರುವುದಿಲ್ಲ ಎಂದರೆ ಸಾಕ್ಷಿ ನಾನು ಹಬ್ಬ ಹರಿ-ದಿನಗಳಿಗೆ ಬಂದು ಹೋಗುತ್ತಿದ್ದೇ ಎಂದು ಹೇಳುತ್ತಾರೆ . ದಾವಾ ಆಸ್ತಿ ಅಕ್ಕಪಕ್ಕದಲ್ಲಿ ನಮಗೆ ಸಂಬಂದಿಸಿದ ಯಾವುದೇ ಜಮೀನು ಇರುವುದಿಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳ ನಡುವೆ ದಾವಾ

ಆಸ್ತಿ ಸಂಬಂದವಾಗಿ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಇರುವ ವಿಚಾರಗಳನ್ನು ಯಾವುದೇ ದಾಖಲೆ ನೋಡದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಎಲ್ಲಾ ಮಾಹಿತಿ ಸುಳ್ಳ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿ 7 ರವರು ದಾವಾ ಆಸ್ತಿಯ ಸಂಬಂದವಾಗಿ ಸಾಲ ಮಾಡಿರುವ ವಿಚಾರ ಗೊತ್ತಿರುವುದಿಲ್ಲ . ನನಗೆ ದಾವಾ ಆಸ್ತಿ ಸಂಬಂದ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು